# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಹೊಳಲ್ಕೆರೆ.

## ಸಿ.ಸಿ. ನಂ. 1084/2020

ದಿನಾಂಕ 30/07/2025

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಹಾಲೇಶ್ ಜೆ. | ಪಿ.ಡಬ್ಲ್ಯು. | 5 |
| ತಂದೆಯ ಹೆಸರು | : | ಜಾನಬಸಪ್ಪ | ಸಿ.ಡಬ್ಲ್ಯು. | 5 |
| ವಯಸ್ಸು | : | 38 ವರ್ಷ | | |
| ಉದ್ಯೋಗ | : | ಎಚ್.ಸಿ.1191, ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ | | |
| ವಾಸ ಸ್ಥಳ | : | ಚಿತ್ರದುರ್ಗ | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು ಚಿತ್ರದುರ್ಗದ ಡಿ.ಸಿ.ಐ.ಬಿ. ಘಟಕದಲ್ಲಿ 2013 ರಿಂದ 2016 ರವರೆಗೆ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25/07/2015 ರಂದು ನಾನು ಡಿ.ಸಿ.ಐ.ಬಿ. ಘಟಕದಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ–1 ರವರು ನನ್ನನ್ನು, ಚಾಸಾ–4 ಮತ್ತು 6 ರವರನ್ನು ಕರೆದು ಮಾನ್ಯ ಎಸ್.ಪಿ. ಸಾಹೇಬರಿಗೆ ಹೊಳಲ್ಕೆರೆ ತಾಲ್ಲೂಕು ಆರ್.ಗೊಲ್ಲರಹಟ್ಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪಕ್ಕ ಪೆಟ್ಟಿಗೆ ಅಂಗಡಿಯ ಬಳಿ ಯಾರೋ ಇಬ್ಬರು ಆಸಾಮಿಗಳು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿದ್ದು, ನಮಗೆ ದಾಳಿ ಮಾಡಿ ಎಂದು ಆದೇಶ ಮಾಡಿದ್ದರಿಂದ ನಾವು ಹೋಗಿ ದಾಳಿ ಮಾಡೋಣವೆಂದು ತಿಳಿಸಿರುತ್ತಾರೆ. ನಂತರ ನಾವುಗಳು ಚಾಸಾ–1 ರವರೊಂದಿಗೆ ಇಲಾಖಾ ಜೀಪಿನಲ್ಲಿ ಸಂಜೆ 4 ಗಂಟೆಗೆ ಚಿತ್ರದುರ್ಗ ಬಿಟ್ಟು 5 ಗಂಟೆಗೆ ಹೊಳಲ್ಕೆರೆಗೆ ಬಂದು ಬಸ್ ನಿಲ್ದಾಣದ ಬಳಿ ಸಂಜೆ 5.15 ಗಂಟೆಗೆ ಚಾಸಾ2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ದಾಳಿಯ ವಿಚಾರ ತಿಳಿಸಿ, ಅವರಿಗೆ ಪಂಚರಾಗಿ ಸಹಕರಿಸಿ ಎಂದು ಕೋರಿಕೊಂಡ ಮೇರೆಗೆ ಅವರುಗಳು ಒಪ್ಪಿಕೊಂಡಿರುತ್ತಾರೆ. ಅವರನ್ನು ಜೊತೆಗೆ ಕರೆದುಕೊಂಡು ಸಂಜೆ 5.30 ಗಂಟೆಗೆ ಹೊಳಲ್ಕೆರೆ ಬಿಟ್ಟು ಸಂಜೆ 6.15 ಗಂಟೆಗೆ ಆರ್. ಗೊಲ್ಲರಹಳ್ಳಿ ಗ್ರಾಮಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಎಲ್ಲರೂ ಕೆಳಗೆ ಇಳಿದು ಕಾಲ್ನಡಿಗೆಯಲ್ಲಿ ನಡೆದುಕೊಂಡು ಸ್ಥಳದ ಬಳಿ ಹೋಗಿ ಎಲ್ಲರೂ ಮರೆಮಾಚಿಕೊಂಡು ನಿಂತು ನೋಡಲಾಗಿ ಯಾರೋ ಇಬ್ಬರು ಆಸಾಮಿಗಳು

ಪೆಟ್ಟಿಗೆ ಅಂಗಡಿಯ ಮುಂಭಾಗದಲ್ಲಿ ರಟ್ಟಿನ ಬಾಕ್ಸ್ ಗಳಲ್ಲಿ ಮದ್ಯವನ್ನು ಇಟ್ಟುಕೊಂಡು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ಅವರುಗಳನ್ನು ನಾವು ಹಿಡಿಯಲು ಪ್ರಯತ್ನಿಸಿದಾಗ ಅವರು ತಪ್ಪಿಸಿಕೊಂಡು ಓಡಿ ಹೋಗಲು ಪ್ರಯತ್ನಪಟ್ಟವರಲ್ಲಿ ಒಬ್ಬ ಆಸಾಮಿಯನ್ನು ಹಿಡಿದುಕೊಂಡಿರುತ್ತೇವೆ ಮತ್ತೊಬ್ಬ ಆಸಾಮಿ ಸಿಗದೆ ಓಡಿ ಹೋಗಿರುತ್ತಾನೆ. ನಾವು ಹಿಡಿದುಕೊಂಡವನ ಹೆಸರು ವಿಳಾಸ ಕೇಳಲಾಗ ಜಿ.ಆರ್.ಚಿಕ್ಕಣ್ಣ ತಂದೆ ರಂಗಪ್ಪ, ಗೊಲ್ಲರಹಳ್ಳಿ ಗ್ರಾಮ ಎಂದು ತಿಳಿಸಿದ್ದು, ಓಡಿ ಹೋದ ಆಸಾಮಿಯ ಹೆಸರು ವಿಳಾಸ ಕೇಳಲಾಗಿ ಮಂಜುನಾಥ ಯಾನೆ ಮಂಜಪ್ಪ ತಂದೆ ನಾಗರಾಜಪ್ಪ, ಗೊಲ್ಲರಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ನಾವು ಆತನನ್ನು ಮದ್ಯ ಮಾರಾಟ ಮಾಡಲು ಸರ್ಕಾರದ ಪರವಾನಗಿ ಇದೆಯೇ ಎಂದು ಕೇಳಲಾಗಿ ಅವನು ಇಲ್ಲ ಎಂದು ತಿಳಿಸಿರುತ್ತಾನೆ. ನಂತರ ಮದ್ಯ ಬಾಟಲಿಗಳಿದ್ದ ರಟ್ಟಿನ ಬಾಕ್ಸ್ ಗಳನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಸದರಿ ಬಾಕ್ಸ್ ಗಳಲ್ಲಿ 180 ಎಂ.ಎಲ್. ನಓಲ್ಡ್ ಟವರಿನ್ ವಿಸ್ಕಿಯ ಒಟ್ಟು 106 ಪೌಚುಗಳು, 90 ಎಂ.ಎಲ್. ನ 96 ರಾಜಾ ವಿಸ್ಕಿ ಪೌಚುಗಳು, 180 ಎಂ.ಎಲ್.ನ 17 ರಾಜಾ ವಿಸ್ಕಿ ಪೌಚುಗಳು, 330 ಎಂ.ಎಲ್.ನ 19 ನಾಕೌಟ್ ಬಾಟಲಿಗಳು ಇರುವುದು ಕಂಡುಬಂದಿರುತ್ತದೆ. ಸದರಿ ಮದ್ಯದ ಬಾಟಲಿಗಳಲ್ಲಿ ತಲಾ ಒಂದನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಸ್ಯಾಂಪಲ್ ಗಾಗಿ ತೆಗೆದಿದ್ದು, ಅವುಗಳಿಗೆ ಬಿಳಿ ಬಟ್ಟೆಯಿಂದ ಹೊಲೆದು ದಾರದಿಂದ ಕಟ್ಟಿ ಪಿ.ಆರ್.ಒ. ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿರುತ್ತೇವೆ. ಎಲ್ಲಾ ಮುದ್ದೆ ಮಾಲುಗಳ ಒಟ್ಟು ಬೆಲೆ 10100/- ಆಗಿದ್ದು ಪಂಚನಾಮೆಯನ್ನು ಸಂಜೆ 7 ರಿಂದ 8 ಗಂಟೆಯವರೆಗೆ ವಿದ್ಯುತ್ ದೀಪದ ಬೆಳಕಿನಲ್ಲಿ ಜರುಗಿಸಿರುತ್ತೇವೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಆರೋಪಿಗಳನ್ನು ಮತ್ತು ಮುದ್ದೆ ಮಾಲನ್ನು ನೋಡಿದರೆ ಪುನಃ ಗುರುತಿಸುತ್ತೇನೆ ಎಂದು ದಿನಾಂಕ 26/02/2015 ರಂದು  ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನಿಪಿ-1 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1(ಈ) ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು – 2 ನೇ ಆರೋಪಿ ಪರ – ಶ್ರೀ ಟಿ.ಎನ್.ಎಂ. ವಕೀಲರಿಂದ</u>**

ಹೊಳಲ್ಕೆರೆ ಇಂದ ಘಟನಾ ಸ್ಥಳವು ನೈರುತ್ಯ ದಿಕ್ಕಿನಲ್ಲಿ ಇದೆ. ದಾಳಿ ಕಾಲಕ್ಕೆ ನಾವು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಅಕ್ಕಪಕ್ಕದ ಜನರೆಲ್ಲರೂ ಸೇರಿದ್ದರು. ಪೆಟ್ಟಿಗೆ ಅಂಗಡಿಯ ಚಕ್ಕುಬಂಧಿ ಹೇಳಲಾಗುವುದಿಲ್ಲ. ನಾವು ದಾಳಿಗೆ ಹೋದಾಗ ಮುಸ್ಸಂಜೆಯಾಗಿದ್ದರಿಂದ ತಪ್ಪಿಸಿಕೊಂಡ ಆರೋಪಿಯನ್ನು ಸರಿಯಾಗಿ ನೋಡಲು ನಮಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೂ ಮತ್ತು ಹೊಳಲ್ಕೆರೆಗೂ ಸುಮಾರು 6 ರಿಂದ 8 ಕಿಮೀ ಅಂತರವಿದೆ. ಘಟನಾ ಸ್ಥಳಕ್ಕೆ ಹೋಗಲು ಹೊಳಲ್ಕೆರೆಯಿಂದ ಸುಮಾರು 20 ನಿಮಿಷ ಬೇಕಾಗುತ್ತದೆ. ನಿಪಿ-1 ನ್ನು ಬರೆದವರು ಯಾರು ಎಂದು ಹೇಳಲಾಗುವುದಿಲ್ಲ. ಘಟನಾ ಸ್ಥಳವು ನಮಗೆ ಮೊದಲೇ ಗೊತ್ತಿತ್ತು. ಯಾರ ಮನೆಯ ಹತ್ತಿರ ನಿಂತು ಮರೆಮಾಚಿ ನೋಡಿರುತ್ತೇವೆಂದು ಹೇಳಲು ಆಗುವುದಿಲ್ಲ. ಚಾ.ಸಾಃ 2

ಮತ್ತು 3 ರವರು ಹೊಳಲ್ಕೆರೆ ಬಸ್ ನಿಲ್ದಾಣದ ಬಳಿ ಇದ್ದರು. ಚಾ.ಸಾ–2 ಮತ್ತು 3 ರವರನ್ನು ಚಾಸಾ–1 ರವರು ಕರೆಸಿರುತ್ತಾರೆ. ನಾವು ಘಟನಾ ಸ್ಥಳಕ್ಕೆ ಹೋದಾಗ ಮದ್ಯವನ್ನು ಖರೀದಿಸುವ ಯಾವುದೇ ಗಿರಾಕಿಗಳು ಅಲ್ಲಿ ಇರಲಿಲ್ಲ. ನಿಪಿ–1 ರಲ್ಲಿ ನಾವು ವಶಪಡಿಸಿಕೊಂಡ ಮದ್ಯದ ಪೌಚುಗಳ ತಯಾರಿಕಾ ದಿನಾಂಕ, ಇಸವಿ ಮತ್ತು ಬ್ಯಾಚ್ ಗಳ ನಂಬರುಗಳನ್ನು ನಮೂದಿಸಿಕೊಂಡಿರುವುದಿಲ್ಲ. ಅದೇ ರೀತಿ ಬಿಳಿ ಚೀಲದ ಮೇಲೆ ಇರುವ ಮಾರ್ಕ್ ಗಳ ಬಗ್ಗೆಯೂ ಸಹ ನಮೂದಿಸಿರುವುದಿಲ್ಲ. ದಿನಾಂಕ 25/02/2015 ರಂದು ಯಾವುದೇ ಘಟನೆ ನಡೆದೇ ಇಲ್ಲ ಮತ್ತು ನಾವು ಯಾವುದೇ ದಾಳಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಠಾಣೆಗೆ ವಾಪಸ್ಸು ಬಂದಾಗ ಇಲಾಖಾ ಜೀಪಿನಲ್ಲಿ ಒಟ್ಟು 8 ಜನ ಬಂದಿರುತ್ತೇವೆ. ಆರೋಪಿಗೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಗಳಿಗೋಸ್ಕರ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಸಂಗತಿಗಳೆಲ್ಲ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

C/C **ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.**